# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 270 |
| 2 | ಸದಸ್ಯರ ಹೆಸರು | : | ಶ್ರೀ ಯು. ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 06-07-2023 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಬಸವನಗುಡಿ ವಿಧಾನಸಭಾ ಕ್ಷೇತ್ರದ ಚನ್ನಮ್ಮನಕೆರೆ ಅಚ್ಚುಕಟ್ಟು ಆಟದ ಮೈದಾನದಲ್ಲಿರುವ ಸ್ಕೇಟಿಂಗ್ ಗ್ರೌಂಡ್‌ನ ನಿರ್ಮಾಣಕ್ಕೆ ಸರ್ಕಾರ ಬೆಂಗಳೂರು ಮಹಾನಗರ ಪಾಲಿಕೆ ನೀಡಿರುವ ಅನುದಾನವೆಷ್ಟು; ಇವುಗಳಲ್ಲಿ ಖರ್ಚಾಗಿರುವ ಅನುದಾನವೆಷ್ಟು; | ಬಸವನಗುಡಿ ವಿಧಾನಸಭಾ ಕ್ಷೇತ್ರದ ಚನ್ನಮ್ಮನಕೆರೆ ಅಚ್ಚುಕಟ್ಟು ಆಟದ ಮೈದಾನದಲ್ಲಿರುವ ಸ್ಕೇಟಿಂಗ್ ಗ್ರೌಂಡ್‌ನ ನಿರ್ಮಾಣಕ್ಕೆ ಸರ್ಕಾರವು ರೂ.15.00 ಕೋಟಿಗಳ ಅನುದಾನವನ್ನು ನಿಗಧಿಪಡಿಸಿರುತ್ತದೆ. ಸದರಿ ಅನುದಾನದಲ್ಲಿ, ಹಾಲಿ ಇದ್ದ "ಸ್ಕೇಟಿಂಗ್ ಗ್ರೌಂಡ್" ಅಭಿವೃದ್ಧಿ ಪಡಿಸಲು ರೂ.5.53 ಕೋಟಿಗಳ ವೆಚ್ಚ ಮಾಡಲಾಗಿರುತ್ತದೆ. |
| ಆ) | ಸದರಿ ಸ್ಕೇಟಿಂಗ್ ಗ್ರೌಂಡ್‌ನ ಕಾಮಗಾರಿಯು ಪೂರ್ಣಗೊಂಡಿದೆಯೆ; | ಹೌದು. ಪೂರ್ಣಗೊಂಡಿರುತ್ತದೆ. |
| ಇ) | ಹಾಗಿದ್ದಲ್ಲಿ, ಸ್ಕೇಟಿಂಗ್ ಗ್ರೌಂಡ್‌ನ ನಿರ್ವಹಣೆಯನ್ನು ಸರ್ಕಾರದ ಯಾವ ಇಲಾಖೆ ನಿರ್ವಹಿಸುತ್ತಿದೆ; ಅಥವಾ ಖಾಸಗಿಯವರಿಗೆ ನೀಡಲಾಗಿದೆಯೆ; | ಸ್ಕೇಟಿಂಗ್ ಗ್ರೌಂಡ್‌ನ ಕಾಮಗಾರಿಯು ಇತ್ತೀಚೆಗಷ್ಟೆ ಪೂರ್ಣಗೊಂಡಿದ್ದು, ಬಿಬಿಎಂಪಿ ವತಿಯಿಂದ ನಿರ್ವಹಿಸಲಾಗುತ್ತಿದೆ. |
| ಈ) | ಖಾಸಗಿಯವರಿಗೆ ನೀಡಿದ್ದಲ್ಲಿ, ಇ-ಟೆಂಡರ್ ನೋಟಿಫಿಕೇಷನ್ ಹಾಗೂ ನಿಬಂಧನೆಗಳ ಸಂಪೂರ್ಣ ವಿವರವನ್ನು ಒದಗಿಸುವುದು; | ಉದ್ಭವಿಸುವುದಿಲ್ಲ. |
| ಉ) | ಸದರಿ ಸ್ಕೇಟಿಂಗ್ ಗ್ರೌಂಡ್‌ನ ನಿರ್ವಹಣೆಯಿಂದ ಸರ್ಕಾರ / ಬೆಂಗಳೂರು ಮಹಾನಗರ ಪಾಲಿಕೆಗೆ ವಾರ್ಷಿಕ ಸಂದಾಯವಾಗುತ್ತಿರುವ ಮೊತ್ತವೆಷ್ಟು? (ವಿವರ ನೀಡುವುದು) | ಉದ್ಭವಿಸುವುದಿಲ್ಲ. |

**ಸಂಖ್ಯೆ: ನಅಇ 265 ಎಂಎನ್‌ವೈ 2023 (ಇ)**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ